ಕೆಲಸ ಆರಂಭವಾಗಿದೆ. ಸಧ್ಯಕ್ಕೆ ಈ ಒಂದು ರಸ್ತೆ ಕೆಲಸ ಪೂರ್ತಿಯಾದರೆ ಮಂಡ್ಯ ನಗರದಿಂದ ಹೋಗತಕ್ಕಂಥ ಟ್ರಾಫಿಕ್‌ಗಳಿಗೂ ಕೂಡ ಅನುಕೂಲವಾಗುತ್ತದೆ. ಮಂಡ್ಯ ನಗರದ ಒಳಗಡೆ ಹೋಗತಕ್ಕವರಿಗೆ ಈ ಎಂ.ಸಿ. ರಸ್ತೆ ಅಭಿವೃದ್ಧಿ ಕೆಲಸ ಪೂರ್ತಿಯಾದ ಮೇಲೆ ಟ್ರಾಫಿಕ್ ಆಟೋಮೆಟಿಕಲೀ ಕಡಿಮೆಯಾಗುತ್ತದೆ. ಅಂತಹ ತೊಂದರೆ ಏನೂ ಆಗುವುದಿಲ್ಲ. ಎಂ.ಸಿ. ರಸ್ತೆ ಅಭಿವೃದ್ಧಿಯಾಗಬೇಕು, ಇದರ ಜೊತೆಗೆ ಇನ್ನೊಂದು ವರ್ತುಲ ರಸ್ತೆಯೂ ಕೂಡ ಬೇಕೆಂದರೆ ಕಷ್ಟವಾಗುತ್ತದೆ. ಅದನ್ನು ಬೇರೆಯಾಗಿಯೇ ಪರಿಶೀಲನೆ ಮಾಡಬೇಕಾಗುತ್ತದೆ. ಇದರೊಳಗೆ ಆ ವಿಷಯ ತೆಗೆದುಕೊಳ್ಳಲು ಬರುವುದಿಲ್ಲ.

ಗ್ರಾಮಗಳಲ್ಲಿ ಕುಸ್ತಿ ಪಟುಗಳಿಗೆ ತರಬೇತಿ

576 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಗ್ರಾಮೀಣ ಯುವಕರ ಶಾರೀರಿಕ ಅಭಿವೃದ್ಧಿಗಾಗಿ ಪ್ರತಿ ಗ್ರಾಮಗಳಲ್ಲಿ ಕುಸ್ತಿ ಪಟುಗಳಿಗೆ ತರಬೇತಿ ಕೊಡುವ ಗರಡಿ ಮನೆಗಳನ್ನು ಕಟ್ಟಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?*

ಆ) *ಉತ್ತರ ಕರ್ನಾಟಕದಲ್ಲಿ ಕುಸ್ತಿ ಸ್ಪರ್ಧೆಗಳಿಗಾಗಿ ಕುಸ್ತಿ ಅಖಾಡಾ ನಡೆಯಬೇಕಾದ ಪ್ರಯುಕ್ತ ಬೃಹತ್ ಬಯಲು ರಂಗಮಂದಿರದಂತಿರುವ ಥಿಯೇಟರನ್ನು ಕಟ್ಟಿಸುವ ಯೋಜನೆ ಸರ್ಕಾರ ಕೈಗೊಂಡಿದೆಯೆ?*

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಜಿಲ್ಲಾ ಪಂಚಾಯತ್ ವಲಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಗರಡಿ ಮನೆ ಕಟ್ಟಿಸುವ ಯೋಜನೆಯೊಂದಿದೆ.

ಆ) ಇಲ್ಲ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ನಾಡಿನ ಶೇಕಡ 70ರಷ್ಟು ಗ್ರಾಮೀಣ ಪ್ರದೇಶದಲ್ಲಿರುವ ಯುವಶಕ್ತಿಗೆ ಮತ್ತು ಯುವ ಜನತೆಗೆ ಅದರಲ್ಲೂ ಕೃಷಿ ಕಾಯಕದಲ್ಲಿರುವಂತಹ ಯುವ ಶಕ್ತಿಗೆ ಪ್ರತಿ ಗ್ರಾಮದಲ್ಲಿಯೂ ಗರಡಿ ಮನೆಗೆ ಆದ್ಯತೆ ಕೊಡುವುದು ಅಗತ್ಯವಾಗಿದೆ. ರಾಜ ಮಹಾರಾಜರ ಕಾಲದಲ್ಲಿ ಅದಕ್ಕೆ ಆದ್ಯತೆ ಕೊಟ್ಟಿದ್ದರು. ಇವತ್ತು ಕೇವಲ ಶಹರದಲ್ಲಿರುವಂತಹ ಕ್ರೀಡಾ ಚಟುವಟಿಕೆಗಳಿಗೆ ಮಾತ್ರ ಆದ್ಯತೆ ನೀಡಲಾಗುತ್ತಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿರುವಂತಹ ಶೇಕಡ 70ರಷ್ಟು ಯುವಶಕ್ತಿಗೆ ಆದ್ಯತೆ ನೀಡುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವಂತಹ ಯುವ ಜನತೆಗೆ ಅವರ ಚಟುವಟಿಕೆಗಳಿಗೆ ಪೂರಕವಾಗಿರುವಂತಹ ಹವ್ಯಾಸಗಳನ್ನು ಬೆಳೆಸುವುದಕ್ಕೆ ಈ ಗರಡಿ ಮನೆಗಳು ಬಹಳ ಅಗತ್ಯವಾಗಿವೆ. ಇಂತಹ ಗರಡಿ ಮನೆಗಳನ್ನು ಈಗ ಗ್ರಾಮ ಪಂಚಾಯಿತಿಗಳಿಂದ ಕಟ್ಟಿಸುತ್ತಿದ್ದೇವೆ

ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಬಹುಶಃ ಹಿಂದೆ ಇದ್ದಂತಹ ಗರಡಿ ಮನೆಗಳೆಲ್ಲಾ ಇಂದು ಗ್ರಾಮಗಳಲ್ಲಿ ನೆಲಸಮವಾಗಿವೆ. ಈ ಗರಡಿ ಮನೆಗಳನ್ನು ಕಟ್ಟಿಸಲು ಪರಿಣಾಮಕಾರಿಯಾದ ಯೋಜನೆಯೊಂದನ್ನು ಸರ್ಕಾರ ಹಮ್ಮಿಕೊಂಡು ಪ್ರತಿ ಗ್ರಾಮದಲ್ಲಿ ಕನಿಷ್ಟ ಒಂದಾದರೂ ಗರಡಿ ಮನೆ ನಿರ್ಮಾಣವಾಗುವಂತೆ ನೋಡಿಕೊಳ್ಳಬೇಕು. ಇದು ಬಹಳ ಮುಖ್ಯವಾದುದು. ಆ ಬಗ್ಗೆ ಸರ್ಕಾರ ಏನಾದರೂ ಯೋಗ್ಯವಾದಂತಹ ಕ್ರಮ ತೆಗೆದುಕೊಳ್ಳುತ್ತದೆಯೇ? ಈಗ ಮಹಾರಾಷ್ಟ್ರ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಬಯಲು ಕುಸ್ತಿ ಮತ್ತು ಇತರ ಸ್ಪರ್ಧೆಗಳನ್ನು ಏರ್ಪಡಿಸಲು ದೊಡ್ಡ ಪ್ರಮಾಣದಲ್ಲಿ ಬಯಲು ಗರಡಿ ಮನೆ ಅಥವಾ ಥಿಯೇಟರ್ ಗರಡಿ ಮನೆಗಳನ್ನು ಅಖಾಡ ಮಾಡಲಿಕ್ಕೆ ಕಟ್ಟಿಸುತ್ತಿದ್ದಾರೆ. ನಾವು ಸಾಹಿತ್ಯ, ನಾಟಕ ಇತ್ಯಾದಿ ಸಾಂಸ್ಕೃತಿಕ ಕಲೆಗಳಿಗೆ ಕಲಾ ಮಂದಿರಗಳನ್ನು ಅಥವಾ ನಾಟಕ ಮಂದಿರಗಳನ್ನು ಇವತ್ತು ಕಟ್ಟಿಸುತ್ತಿದ್ದೇವೆ. ಇದು ಇವತ್ತಿನ ದಿವಸ ಬಹಳ ಅವಶ್ಯ ಇದೆ. ಇದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡು ಬಯಲು ಥಿಯೇಟರ್‌ಗಳನ್ನು ಕಟ್ಟಿಸಿಕೊಡುತ್ತದೆಯೇ? ಎಂದು ತಮ್ಮ ಮೂಲಕ ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಕೆ. ಚಂದ್ರಶೇಖರ್ (ವಾರ್ತಾ ಮತ್ತು ಪ್ರಚಾರ ಸಚಿವರು) (ಮಾನ್ಯ ಯುವಜನ ಸೇವೆ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಒಂದು ಯೋಜನೆ ಆದಕ್ಕಾಗಿ ಇದೆ ಗರಿಷ್ಠ 50 ಸಾವಿರ ರೂಪಾಯಿಗಳನ್ನು ಮೀರದಂತೆ ಪ್ರತಿಯೊಂದು ಜಿಲ್ಲಾ ಪಂಚಾಯತ್‌ಗೆ ಹಣ ಕೊಟ್ಟು ಗರಡಿ ಮನೆ ಕಟ್ಟಿಸುವುದಕ್ಕೆ ಈಗ ಯೋಜನೆ ಇದೆ. 2000-01ನೇ ಇಸವಿಯಲ್ಲಿ 2-3 ಜಿಲ್ಲೆಗಳನ್ನು ಬಿಟ್ಟು ಇತರ ಎಲ್ಲಾ ಜಿಲ್ಲೆಗಳಿಗೆ 17 ಲಕ್ಷ ರೂಪಾಯಿ ಈಗಾಗಲೇ ಮಂಜೂರಾಗಿದೆ. ಅವರ ಹತ್ತಿರ ಹಣ ಈಗಾಗಲೇ ಇದೆ. ಗರಡಿ ಮನೆಗಳನ್ನು ಕಟ್ಟಿಸಲು ಈ ಹಣ ಒದಗಿಸಲಾಗಿದೆ. ಬಯಲು ರಂಗ ಮಂದಿರಗಳನ್ನು ಕಟ್ಟಿಸುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅಂತಹ ಯೋಜನೆ ಸರ್ಕಾರ ಮುಂದೆ ಇಲ್ಲ. ಗರಡಿ ಮನೆಗಳನ್ನು ಕಟ್ಟುವುದಕ್ಕೆ ಮಾತ್ರ ಸರ್ಕಾರ ವ್ಯವಸ್ಥೆ ಮಾಡಿದೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೇ, 50 ಸಾವಿರ ರೂಪಾಯಿಗಳಿಗೆ ಒಂದು ಸಣ್ಣ ಶಾಲಾ ಕೊಠಡಿ ನಿರ್ಮಾಣ ಮಾಡಲೂ ಸಹ ಸಾಧ್ಯವಾಗುವುದಿಲ್ಲ. ಕನಿಷ್ಟ ಎರಡು ಲಕ್ಷ ರೂಪಾಯಿಗಳಾದರೂ ಒಂದು ಗರಡಿ ಮನೆ ನಿರ್ಮಿಸಲು ಬೇಕಾಗುತ್ತದೆ. ದಯವಿಟ್ಟು ಕನಿಷ್ಟ ಒಂದು ಲಕ್ಷ ರೂಪಾಯಿಗಳನ್ನಾದರೂ ಪ್ರತಿ ಹಳ್ಳಿಯಲ್ಲಿ ಗರಡಿ ಮನೆಗಳನ್ನು ನಿರ್ಮಿಸಲು ಮಂಜೂರು ಮಾಡಲು ಸರ್ಕಾರ ಏನಾದರೂ ಯೋಜನೆ ಹಾಕಿಕೊಳ್ಳುತ್ತದೆಯೇ? ಮಹಾರಾಷ್ಟ್ರಕ್ಕೆ ಸಮೀಪವಿರುವ ಉತ್ತರ ಕರ್ನಾಟಕದ ಧಾರವಾಡದಲ್ಲಿ ಒಂದು ಅಖಾಡ ತರಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಸಾಕಷ್ಟು ಕುಸ್ತಿ ಪಟುಗಳು ಅಲ್ಲಿ ಸುತ್ತಮುತ್ತ ಇದ್ದಾರೆ. ಅದಕ್ಕೆ ಉತ್ತೇಜನ ಕೊಡಬೇಕೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ.

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೆ, ಕುಸ್ತಿ ಬಗ್ಗೆ ವಿಶೇಷವಾಗಿ ನಮ್ಮ ರಾಜ್ಯದಲ್ಲಿ ನಿಷ್ಕಾಳಜಿ ಕಾಣುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ವಿಶೇಷವಾಗಿ ಮೈಸೂರು ಭಾಗದಲ್ಲಿ ಹಾಗೂ ನಮ್ಮ ಬಾಗಲಕೋಟೆ, ಬಿಜಾಪುರ, ಬೆಳಗಾಂ ಮತ್ತು ಧಾರವಾಡ ಭಾಗಗಳಲ್ಲಿ

ಕುಸ್ತಿ ಪಟುಗಳು ರಾಷ್ಟ್ರಮಟ್ಟದಲ್ಲಿ ಮಿಂಚುವಂತಹವರನ್ನು ನೋಡುತ್ತಿದ್ದೇವೆ. ಈ ಭಾಗದ ಕುಸ್ತಿ ಪಟುಗಳು ರಾಷ್ಟ್ರ ಮಟ್ಟದಲ್ಲಿ ಎರಡು ಮತ್ತು ಮೂರನೇ ಸ್ಥಾನ ಪಡೆಯುವುದು ನಾವು ನೋಡಿದ್ದೇವೆ. ಈ ಹಿನ್ನೆಲೆಯಲ್ಲಿ ಕುಸ್ತಿಗೆ ವಿಶೇಷವಾದ ಪ್ರೋತ್ಸಾಹ ದೊರಕಬೇಕು. ಸಚಿವರು ಕೇವಲ 50,000 ರೂಪಾಯಿ ಇಟ್ಟಿರುವುದನ್ನು ಹೇಳುತ್ತಿದ್ದಾರೆ. 50,000 ರೂಪಾಯಿ ಒಂದು ಆಶ್ರಯ ಮನೆಗೂ ಸಾಕಾಗುವುದಿಲ್ಲ. ಅದಕ್ಕೆ ವ್ಯವಸ್ಥಿತ ಯೋಜನೆ ಇದೆಯೋ ಹೇಗೆ? 50,000 ರೂಪಾಯಿ ಅಂದಾಜು ಮಾಡಿದಾಗ ನನ್ನ ಅಂದಾಜಿನ ಪ್ರಕಾರ ಬೆಲ್ಲದ್‌ರವರು ಎರಡು ಲಕ್ಷ ರೂಪಾಯಿ ಕೇಳಿದರು, ಮೂರು ಲಕ್ಷ ರೂಪಾಯಿ ಒಂದು ಗರಡಿ ಮನೆಗೆ ಆಗಬಹುದು ಎಂಬ ವಿಚಾರ ಇದೆ. ಆ ದೃಷ್ಟಿಯಿಂದ ಪ್ರತಿಯೊಂದು ಭಾಗಕ್ಕೂ ಯಾವ ಯಾವ ಭಾಗಗಳಲ್ಲಿ ಕುಸ್ತಿ ಪಟುಗಳು ಚೆನ್ನಾಗಿ ಆಡುತ್ತಿದ್ದಾರೆ ಆ ಒಂದೊಂದು ಕ್ಷೇತ್ರಕ್ಕೆ ಮೂರು ಮೂರು ಲಕ್ಷ ರೂಪಾಯಿಗಳನ್ನು ಕೊಡುವ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಯುವಕರನ್ನು ನಾವು ಈ ರೀತಿಯ ರಚನಾತ್ಮಕ ಕೆಲಸದಲ್ಲಿ ತೊಡಗಿಸದೆ ಹೋದರೆ ಆ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡದೆ ಹೋದರೆ ಅವರು ಸಮಾಜಕ್ಕೆ ಹೊರೆಯಾಗಿದ್ದಾರೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ. ನಾವು ಅದರ ಬಗ್ಗೆ ಆರೋಪಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಜಿಲ್ಲಾ ಪಂಚಾಯಿತಿಯವರು ಮಾಡುತ್ತಾರೆಂದು ನಾವು ಹೇಳುತ್ತಿದ್ದೇವೆ. ಜಿಲ್ಲಾ ಪಂಚಾಯಿತಿಯವರು ಏನು ಮಾಡುತ್ತಾರೆಂದು ನಮಗೆ ಗೊತ್ತಿದೆ. ಅವರಿಗೆ ಆರ್ಥಿಕ ಅನುದಾನ ಎಷ್ಟಿದೆ ಎಂದು ಗೊತ್ತಿದೆ. ರಾಜ್ಯ ಸರ್ಕಾರದಿಂದ ಇದಕ್ಕೆ ವಿಶೇಷವಾದ ಯೋಜನೆ ಸಿದ್ಧಪಡಿಸಬೇಕು. ನಾವು ಈಗ ಸಿದ್ಧಪಡಿಸದೆ ಹೋದರೆ ತಾಲ್ಲೂಕು ಪಂಚಾಯಿತಿಯವರು ಮಾಡುತ್ತಾರೆ, ಗ್ರಾಮ ಪಂಚಾಯಿತಿಯವರು ಮಾಡುತ್ತಾರೆಂದು ಅವರ ಮೇಲೆ ಹೇಳಿಕೊಳ್ಳುತ್ತಾ ಕೂತರೆ ಯುವಕರ ಶಕ್ತಿಗೆ ಪ್ರೋತ್ಸಾಹ ನೀಡಿದ ಹಾಗಾಗುವುದಿಲ್ಲ. ನಾವು ಅವರನ್ನು ಬೆಂಬಲಿಸಬೇಕು. ಅವರ ಶಕ್ತಿಯನ್ನು ರಾಷ್ಟ್ರದ ಆಸ್ತಿಯನ್ನಾಗಿ ಮಾಡಿಕೊಳ್ಳಬೇಕೆಂದರೆ ರಾಜ್ಯ ಸರ್ಕಾರದಿಂದ ಒಂದು ವಿಶೇಷವಾದ ಯೋಜನೆಯನ್ನು ರೂಪಿಸಬೇಕೆಂದು ಆಗ್ರಹ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಸಭಾಧ್ಯಕ್ಷರೆ, ಯುವಕರಿಗೆ ಹೆಚ್ಚು ಪ್ರೋತ್ಸಾಹ ಸಿಗುವ ದೃಷ್ಟಿಯಿಂದ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ ಒಂದಾದರೂ ಗರಡಿ ಮನೆ ಮಾಡಬೇಕು, ಎಂದು ಒತ್ತಾಯ ಮಾಡುತ್ತಿದ್ದೇವೆ. ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ ಕೂಡ ಯುವಜನ ಸೇವಾ ಅಧಿಕಾರಿಗಳಿದ್ದರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬರೇ ಒಬ್ಬರು ಯುವ ಜನ ಸೇವಾ ಅಧಿಕಾರಿಗಳಿದ್ದಾರೆ. ಅದನ್ನು ನಾವು ತುಂಬ ನಿರ್ಲಕ್ಷ್ಯ ಮಾಡುತ್ತಿದ್ದೇವೆ. ಯುವ ಜನ ಸೇವಾ ಇಲಾಖೆ ಇದೆಯೋ ಇಲ್ಲವೊ ಎಂದು ಗೊತ್ತಾಗುತ್ತಿಲ್ಲ. ಅದಕ್ಕೋಸ್ಕರ ಈ ಇಲಾಖೆ ಸಕ್ರಿಯವಾಗಿ ಕೆಲಸ ಮಾಡುವ ಹಾಗೆ ಆಗಬೇಕು. ಆ ಖಾತೆ ಸಂಪೂರ್ಣವಾಗಿ ಕೆಲಸ ಮಾಡಿ ಯುವಕರಿಗೆ ಸಂಪೂರ್ಣ ಸಹಕಾರ ಕೊಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಕುಸ್ತಿ ಸ್ಪರ್ಧೆಗಳನ್ನು ಖಾಸಗಿಯಾಗಿ ಸ್ಥಳೀಯ ಸಂಘ ಸಂಸ್ಥೆಗಳು ನಡೆಸುವ ಸಂದರ್ಭದಲ್ಲಿ ವಿಶೇಷ ಪ್ರೋತ್ಸಾಹಧನ ರಾಜ್ಯದಿಂದ ಕೊಡುವುದು ಅವಶ್ಯಕವಿದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ

ಯೋಚನೆ ಮಾಡಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಥಮ ಪ್ರಶಸ್ತಿಯನ್ನು ಪಡೆದ ಈ ಕುಸ್ತಿ ಪಟುಗಳಿಗೆ ಆಹಾರ ಭತ್ಯೆ ಪ್ರವಾಸ ಭತ್ಯೆ ಇನ್ನಿತರ ಭತ್ಯೆಗಳನ್ನು ಕೊಡುವುದರ ಮೂಲಕ ಪ್ರೋತ್ಸಾಹ ನೀಡಬೇಕು. ರಾಜಕೀಯಕ್ಕೂ ಕುಸ್ತಿಗೂ ನೇರ ಸಂಬಂಧವಿರುವುದರಿಂದ ಸನ್ಮಾನ್ಯ ಸಚಿವರು ಇದರಲ್ಲಿ ವಿಶೇಷ ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಇಡೀ ಕರ್ನಾಟಕದಲ್ಲಿ ರಾಣೆಬೆನ್ನೂರು ಕುಸ್ತಿ ಪಟುಗಳಿಗೆ ಹೆಸರುವಾಸಿಯಾದುದು. ಇವತ್ತಿಗೂ ಸಹ ಅಲ್ಲಿ ಕುಸ್ತಿ ಪಟುಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕರ್ನಾಟಕದಲ್ಲಿ ಯಾವುದಾದರೂ ಕಾನ್ಸ್‌ಟ್ಯೂಯೆನ್ಸಿ ಇರಲಿ ಅದರಲ್ಲಿ ರಾಣೆಬೆನ್ನೂರನ್ನು ಆರಿಸಿಕೊಂಡು ವಿಶೇಷವಾದ ಯೋಜನೆ ಒಂದನ್ನು ತಯಾರು ಮಾಡುವುದಕ್ಕೆ ಸರ್ಕಾರ ಗಮನ ಹರಿಸುತ್ತದೆಯಾ?

ಶ್ರೀ ಬಿ.ಕೆ. ಚಂದ್ರಶೇಖರ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಜಿಲ್ಲಾ ಪಂಚಾಯಿತಿಯವರಿಗೆ ಕೆಲಸ ವಹಿಸಿದ್ದೇವೆಂದು ಹೇಳಲಿಲ್ಲ. 17 ಲಕ್ಷ ರೂಪಾಯಿ ಮಂಜೂರಾತಿ ಆಗಿರುವ ವಿಚಾರ ಹೇಳಿದೆ. ಬೆಲ್ಲದ್‌ರವರು ಮತ್ತು ಇತರ ಮಾನ್ಯ ಸದಸ್ಯರು ಹೇಳಿದರು ಆ ಹಣ 50,000 ರೂಪಾಯಿ ಇದೆ ಅದು ಸಾಕಾಗುವುದಿಲ್ಲವೆಂದು ನಾನು ಇದನ್ನು ಮಾನ್ಯ ಯುವ ಜನ ಸೇವಾ ಸಚಿವರ ಗಮನಕ್ಕೆ ಇದನ್ನು ತಂದು ಯಾವ ಆಧಾರದ ಮೇಲೆ ಇದನ್ನು ಲೆಕ್ಕ ಹಾಕಿದ್ದಾರೆ, ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆಯಾ ಎಂದು ನೋಡುತ್ತೇನೆ. ಎರಡನೆಯದಾಗಿ ಕಬಡ್ಡಿ, ಕುಸ್ತಿ ಇಂಥ ನಮ್ಮ ಇಂಡೀಜಿನಸ್ ಗೇಮ್ಸ್‌ಗೆ ಈಗಾಗಲೇ ಎಲ್ಲಾ ಸರ್ಕಾರಗಳು ಇದಕ್ಕೆ ಉತ್ತೇಜನ ಕೊಟ್ಟುಕೊಂಡು ಬಂದಿದ್ದಾರೆ. ಕಳೆದ 10-12 ವರ್ಷಗಳಿಂದ ಕೊಟ್ಟ ಉತ್ತೇಜನವನ್ನು ನಮ್ಮ ಸರ್ಕಾರವೂ ಮುಂದುವರೆಸಿಕೊಂಡು ಬಂದಿದೆ. ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕಬಡ್ಡಿ ಆಟಗಾರರಿಗೆ ಒಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡುವುದಕ್ಕೆ ಸಾಧ್ಯವಾಗಿದೆ. ಈ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಇನ್ನಷ್ಟು ಬಜೆಟ್ ಸರ್ಕಾರ ಹೇಗೆ ಜಾಸ್ತಿಮಾಡಬೇಕೆಂದು ಆಲೋಚನೆ ಮಾಡುತ್ತದೆ.

ಅಧ್ಯಕ್ಷರು : ಶ್ರೀ ರವೀಂದ್ರನಾಥ್‌ರವರ ಪ್ರಶ್ನೆಗೆ ಸರ್ಕಾರದವರು ಸಮಯ ಕೇಳಿದ್ದಾರೆ.

ಶ್ರೀ ಎಸ್.ಎ. ರವೀಂದ್ರನಾಥ್ : ಸಕ್ಕರೆ ಕಂಪನಿ ಬಗ್ಗೆ ಯಾವುದೇ ಪ್ರಶ್ನೆ ಕೇಳಿದರೂ ಸಮಯ ಕೇಳುತ್ತಾರೆ.

ಶ್ರೀ ಎ. ಕೃಷ್ಣಪ್ಪ : ಸಕ್ಕರೆ ಮತ್ತು ಪಶುಸಂಗೋಪನೆ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಪ್ರಶ್ನೆ ಇರುವುದರಿಂದ ನಾವು ಅವರಿಗೆ ಬರೆದಿದ್ದೇವೆ. ಅವರಿಂದ ಉತ್ತರ ಬಂದ ನಂತರ ಕೊಡುತ್ತೇವೆ.

ಬಾಗಲಕೋಟೆ ನಗರಕ್ಕೆ ಸಭಾಮಂದಿರ ನಿರ್ಮಾಣ

578 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?